# ವಿಶ್ವದ ಮೊದಲ ಎಐ ಉಡುಗೆ

**ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧರಿಸಿದ ವಿಶ್ವದ ಮೊದಲ ಉಡುಗೆ ತಯಾರಾಗಿದೆ. ಈ ಉಡುಗೆಗೆ ರೊಬೋಟಿಕ್ ಹಾವುಗಳು ಮೆರುಗು ತಂದಿವೆ.**

■ **ಶಶಿಕುಮಾರ್ ಸಿ.**

ಗೂಗಲ್ ಎಂಜಿನಿಯರ್ ಒಬ್ಬರು ರೊಬೋಟಿಕ್ ಹಾವುಗಳಿರುವ ವಿಶ್ವದ ಮೊದಲ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಉಡುಗೆಯನ್ನು ರಚಿಸಿದ್ದಾರೆ. ಇದು ವಿಶ್ವದ ಫ್ಯಾಷನ್ ಲೋಕದ ಗಮನ ಸೆಳೆದಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ಅಷ್ಟಕ್ಕೂ ಈ ಉಡುಗೆ ನಿರ್ಮಿಸಿದವರು ಟೆಕ್ ದೈತ್ಯ ಕಂಪನಿಯಾದ ಗೂಗಲ್‌ನ ಸಾಫ್ಟ್‌ವೇರ್ ಎಂಜಿನಿಯರ್ (SheBuildsRobots.org) ಸಂಸ್ಥಾಪಕಿ ಕ್ರಿಸ್ಟಿನಾ ಅರ್ನ್‌ಸ್ಟ್. ಕ್ರಿಸ್ಟಿನಾ 'ಶಿಬಿಲ್ಡ್ಸ್‌ರೊಬೋಟ್ಸ್.ಆರ್ಗ್' ಎಂಬ ರೊಬೋಟಿಕ್ಸ್ ಕಂಪನಿಯ ಸಿಇಒ ಸಹ. ಇವರು ತಮ್ಮ ಈ ಕಂಪನಿಯ ಮೂಲಕ ರೊಬೋಟಿಕ್ ತಂತ್ರಜ್ಞಾನದಲ್ಲಿ ಮಹಿಳೆಯರು ತೊಡಗಿಕೊಳ್ಳಲು ಪ್ರೇರೇಪಿಸುತ್ತಿದ್ದಾರೆ. ಹಲವು ಮಹಿಳಾ, ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

ವಿಶ್ವದ ಮೊದಲ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಉಡುಗೆಗೆ 'ಮೆಡುಸಾ ಉಡುಗೆ' ಎಂದು ಕ್ರಿಸ್ಟಿನಾ ಹೆಸರಿಸಿದ್ದು, ಈ ಉಡುಗೆಯನ್ನು ರೂಪಿಸಿದ ಸಂಪೂರ್ಣ ವಿಡಿಯೊವನ್ನು ಅವರು ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಮೆಡುಸಾ ಕಪ್ಪು ಬಣ್ಣದ್ದಾಗಿದ್ದು, ಆ ಉಡುಗೆಯ ಸುತ್ತಲೂ ಮೂರು ಚಿನ್ನದ ಬಣ್ಣದ ಹಾವುಗಳು ಮತ್ತು ಕುತ್ತಿಗೆಯಲ್ಲಿ ಒಂದು ದೊಡ್ಡ ರೊಬೋಟಿಕ್ ಹಾವುಗಳನ್ನು ಸ್ವತಃ ತಾವೇ ತಯಾರಿಸಿ ಅಳವಡಿಸಿರುವುದು ಉಡುಗೆಯ ಅಂದವನ್ನು ಇನ್ನಷ್ಟು ಹೆಚ್ಚಿಸಿದೆ.

ಉಡುಗೆ ಬಗ್ಗೆ ಮಾತನಾಡಿರುವ ಅರ್ನ್‌ಸ್ಟ್,



'ನಾನು ಈ ರೊಬೋಟಿಕ್ ಹಾವಿನ ಡ್ರೆಸ್ ವಿನ್ಯಾಸಗೊಳಿಸಿದ್ದು, ಇದರ ಅಂತಿಮ ಕಾರ್ಯವೂ ಮುಗಿದಿದೆ. ಕೋಡಿಂಗ್‌ನ ಆಪ್ಷನಲ್ ಮೋಡ್ ಅನ್ನು ಇದಕ್ಕೆ ಅಳವಡಿಸಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿಸಿ ಜನರ ಮುಖಗಳನ್ನು ಪತ್ತೆ ಹಚ್ಚುವ ಕ್ಷಮತೆಯನ್ನು ಹೊಂದಿದೆ. ಈ ಡ್ರೆಸ್ ಧರಿಸಿದವರೆಡೆಗೆ ಯಾರೇ ನೋಡಿದರೂ ಅವರತ್ತ ಚಲಿಸುವಂತೆ ಈ ರೊಬೋಟಿಕ್ ಹಾವುಗಳು ಹಾಗೂ ಇದರಲ್ಲಿನ ಎಐ ಮಾಡುತ್ತದೆ. ಬಹುಶಃ ಇಂತಹ ಉಡುಗೆ ಜಗತ್ತಿನಲ್ಲಿ ಇದೇ ಮೊದಲು' ಎಂದಿದ್ದಾರೆ.

ಉಡುಗೆ ತಯಾರಿ ವೇಳೆ ಎದುರಾದ ಕೆಲ ವಿಫಲ ಪ್ರಯತ್ನಗಳನ್ನೂ ವಿಡಿಯೊದಲ್ಲಿ ತೋರಿಸಿರುವ ಕ್ರಿಸ್ಟಿನಾ, ವ್ಯಕ್ತಿಗಳ ಮುಖ ಗುರುತಿಸಲು ಹಾಗೂ ಪತ್ತೆ ಹಚ್ಚಲು ರೊಬೋಟಿಕ್ ಹಾವನ್ನು ಹೇಗೆ ಪ್ರೋಗ್ರಾಮ್ ಮಾಡಲಾಗಿದೆ ಎಂಬುದನ್ನು ತೋರಿಸಿದ್ದಾರೆ. ಈ ಹಿಂದೆಯೂ ಅವರು ಉಡುಪಿನ ವಿವಿಧ ಘಟಕಗಳನ್ನು ರಚಿಸುವ ಪ್ರಕ್ರಿಯೆಯನ್ನು ತೋರಿಸುವ ವಿವಿಧ ರೀಲ್ಸ್‌ಗಳನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ.

### ಮಿಲಿಯನ್‌ಗಟ್ಟಲೆ ವೀಕ್ಷಣೆ

ಎಐ ಉಡುಗೆ ತಯಾರಿಯ ಸಂಪೂರ್ಣ ವಿಡಿಯೊವನ್ನು ಅವರು ರೀಲ್ಸ್ ಸೇರಿದಂತೆ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಇದನ್ನು ಮಿಲಿಯನ್‌ಗಟ್ಟಲೆ ಜನರು ವೀಕ್ಷಣೆ ಮಾಡಿದ್ದಾರೆ. ಲಕ್ಷಾಂತರ ಲೈಕ್ಸ್ ಸಿಕ್ಕಿವೆ. ಈ ಕುರಿತು ಅನೇಕರು ಕಾಮೆಂಟ್ ಕೂಡ ಮಾಡಿದ್ದಾರೆ. ■

## ದೇಶದ ಚಿತ್ತ ಸೂಪರ್ ಕಂಪ್ಯೂಟರ್‌ನತ್ತ

ಮೇಕ್ ಇನ್ ಇಂಡಿಯಾದ ಭಾಗವಾಗಿ ಎಯುಎಂ ಎಂದು ಕರೆಯುವ ದೇಶೀಯ ಹೈ ಪರ್ಫಾರ್ಮೆನ್ಸ್ ಕಂಪ್ಯೂಟಿಂಗ್ (ಎಚ್‌ಪಿಸಿ) ಪ್ರೊಸೆಸರ್ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮುಂದಾಗಿದೆ.

'ಸೂಪರ್ ಕಂಪ್ಯೂಟರ್‌ಗೆ ಅಗತ್ಯವಾದ ಪ್ರೊಸೆಸರ್ ಅಭಿವೃದ್ಧಿ ಮಾಡುವುದರ ಮೂಲಕ ಸೂಪರ್ ಕಂಪ್ಯೂಟಿಂಗ್‌ನಲ್ಲಿ ಜಾಗತಿಕ ನಾಯಕನಾಗುವ ಗುರಿ ಹೊಂದಲಾಗಿದೆ' ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್. ಕೃಷ್ಣನ್ ಈಚೆಗೆ ಹೇಳಿದ್ದಾರೆ.

ದೇಶೀಯವಾಗಿ ನಿರ್ಮಿಸಲಾಗುವ ಎಚ್‌ಪಿಸಿ ಚಿಪ್‌ನ ವಿನ್ಯಾಸ ಮತ್ತು ಅಭಿವೃದ್ಧಿಗಾಗಿ ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್‌ಡ್ ಕಂಪ್ಯೂಟಿಂಗ್ (ಸಿಡ್ಯಾಕ್) ಮಾಸ್‌ಚಿಪ್ ಟೆಕ್ನಾಲಜೀಸ್ ಮತ್ತು ಸೋಷಿಯೋನೆಕ್ಸ್ಟ್ ಇಂಕ್ ಜೊತೆ ಪಾಲುದಾರಿಕೆಗಾಗಿ ನಡೆದ ಕಾರ್ಯಕ್ರಮದಲ್ಲಿ ಸಚಿವರು ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಎಚ್‌ಪಿಸಿ ಪ್ರೊಸೆಸರ್ ಆರ್ಮ್ ಆರ್ಕಿಟೆಕ್ಚರ್ ಅನ್ನು ಆಧರಿಸಿದೆ ಮತ್ತು ಟಿಎಸ್‌ಎಂಸಿಯ (ತೈವಾನ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ) 5 ಎನ್‌ಎಂ ತಂತ್ರಜ್ಞಾನದಂತೆ ರಚಿಸಲಾಗಿದೆ. ಇದು ಚಿಪ್ ವಿನ್ಯಾಸದಲ್ಲಿ ಭಾರತದ ಮಹತ್ವದ ಸಾಧನೆಯಾಗಿದ್ದು, ಉನ್ನತ ಕಾರ್ಯಕ್ಷಮತೆಯ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ದೇಶೀಯ ಮಟ್ಟದ ಅಭಿವೃದ್ಧಿಯಲ್ಲಿ ಭಾರತದ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ.

ಸಿಡ್ಯಾಕ್ ಎಯುಎಂ ಎಂಬ ಸ್ಥಳೀಯ ಎಚ್‌ಪಿಸಿ ಪ್ರೊಸೆಸರ್ ಅನ್ನು ವಿನ್ಯಾಸಗೊಳಿಸುತ್ತಿದೆ. ಭಾರತೀಯ ಸ್ಟಾರ್ಟ್‌ಅಪ್ ಕೀನ್ ಹೆಡ್ಸ್ ಟೆಕ್ನಾಲಜೀಸ್ ಈ ಯೋಜನೆಯ ನಿರ್ವಹಣಾ ಸಲಹೆಗಾರರಾಗಿ (ಪಿಎಂಸಿ) ತೊಡಗಿಸಿಕೊಂಡಿದೆ. ಸರ್ವರ್ ನೋಡ್‌ಗಳು, ಇಂಟರ್ ಕನೆಕ್ಟ್‌ಗಳು ಮತ್ತು ಸಿಸ್ಟಮ್ ಸಾಫ್ಟ್‌ವೇರ್ ಸ್ಟ್ಯಾಕ್‌ನೊಂದಿಗೆ ನಮ್ಮ ಸ್ವದೇಶೀಕರಣ ಪ್ರಯತ್ನಗಳು ಗಣನೀಯವಾಗಿ ಹೆಚ್ಚಾಗುತ್ತಿವೆ. ಈಗ ಸಂಪೂರ್ಣ ಸ್ವದೇಶೀಕರಣಕ್ಕಾಗಿ, ದೇಶೀಯ ಎಚ್‌ಪಿಸಿ ಪ್ರೊಸೆಸರ್ ಎಯುಎಂ ಅಭಿವೃದ್ಧಿಯತ್ತ ದೇಶ ಚಿತ್ತ ಹರಿಸಿದೆ. ■